# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 476 |
| ಸದಸ್ಯರ ಹೆಸರು | : | ಶ್ರೀ ಡಾ.ಚಂದ್ರಶೇಖರ್. ಬಿ. ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13-12-2018 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪ್ರೌಢಶಾಲಾ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, |
| ಆ. | ವರ್ಗಾವಣೆಯಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಿ ಕೂಡಲೇ ಕೌನ್ಸಲಿಂಗ್‌ನಲ್ಲಿ ಕೋರಿಕೆ ವರ್ಗಾವಣೆಯನ್ನು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಕರ್ನಾಟಕ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ, ನಿಯಂತ್ರಣ) ಅಧಿನಿಯಮ 2007ರ ನಿಯಮಗಳು 2017ರಂತೆ ಕೌನ್ಸಲಿಂಗ್ ಮೂಲಕ ಮೊದಲು ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ, ವರ್ಗಾಯಿಸಲು ಅನಂತರ ನಿರಂತರವಾಗಿ 10 ವರ್ಷ ಸೇವೆ ಸಲ್ಲಿಸಿದ, 'ಎ' ವಲಯದ ಅಂದರೆ ನಗರ ಪ್ರದೇಶದ ಶಿಕ್ಷಕರನ್ನು 'ಸಿ' ವಲಯಕ್ಕೆ ಕಡ್ಡಾಯ ವರ್ಗಾವಣೆ ಮಾಡಲು 'ಸಿ' ವಲಯದ ಅಂದರೆ ಗ್ರಾಮೀಣ ಪ್ರದೇಶದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣೆ ಮಾಡಲು ಕ್ರಮ ಕೈಗೊಂಡು, ಅನಂತರ ಕೋರಿಕೆ ವರ್ಗಾವಣೆಗಳನ್ನು ಮಾಡಲು ನಿಯಮಗಳಲ್ಲಿ ಅವಕಾಶವಿದ್ದು, ಈ ಹಂತದಲ್ಲಿ ಕೋರಿಕೆ ವರ್ಗಾವಣೆಗಳನ್ನು ಮಾತ್ರ ಮಾಡಲು ಅವಕಾಶವಿರುವುದಿಲ್ಲ. |
| ಇ. | ಸದರಿ ವರ್ಗಾವಣೆ ನೀತಿ ಹಾಗೂ ನಿಯಮಗಳಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ. ಈ ಸಾಲಿನ ವರ್ಗಾವಣೆಯ ಬಗ್ಗೆ ಸರ್ಕಾರದ ಮುಂದಿನ ನಿಲುವೇನು? | ಕರ್ನಾಟಕ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ, ನಿಯಂತ್ರಣ) ಅಧಿನಿಯಮ 2007ಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. |

ಇಡಿ 66 ಪಿಎಂಎ 2018

[ಹೆಚ್.ಡಿ. ಕುಮಾರಸ್ವಾಮಿ]
ಮುಖ್ಯಮಂತ್ರಿ